IN PURSUIT OF TRUTH
KITTUR RANI CHANNAMMA MEMORIAL COMMITTEE
KITTUR

# ಕಿತ್ತೂರ ರಾಣಿ ಚನ್ನಮ್ಮ ಸ್ಮಾರಕ ಸಮಿತಿ, ಕಿತ್ತೂರ

ಕಿತ್ತೂರ – 591115, ತಾಲೂಕ : ಬೈಲಹೊಂಗಲ, ಜಿಲ್ಲಾ : ಬೆಳಗಾವಿ (ಕರ್ನಾಟಕ)

Phone : 08288-234602 / 234609, Fax : 08288-287299

E-mail : kittursainikschool@gmail.com, Website : www.kittursainikschool.org

ದಿನಾಂಕ: 18.07.2020

ಆತ್ಮೀಯ ಪಾಲಕರೇ/ ಪೋಷಕರೇ,

ಜಾಗತಿಕ ಪಿಡುಗಾದ ಕೋವಿಡ್ –19 ವಿಶ್ವಾದ್ಯಂತ ಭೀತಿ ಸೃಷ್ಟಿಸಿರುವುದು ನಮಗೆಲ್ಲಾ ತಿಳಿದಿದೆ. ಈ ಸಾಂಕ್ರಾಮಿಕವು ಸಾಂಪ್ರದಾಯಿಕ ಶಿಕ್ಷಣದ ಕಲಿಕಾ ವ್ಯವಸ್ಥೆಗೆ ಧಕ್ಕೆ ತಂದಿದೆಯಲ್ಲದೇ ಮಕ್ಕಳನ್ನು ನಿಯಮಿತ ಶಾಲಾ ಚಟುವಟಿಕೆಗಳಿಂದ ದೂರವಿರುವಂತೆ ಮಾಡಿದೆ. ಕಿತ್ತೂರ ರಾಣಿ ಚನ್ನಮ್ಮ ಬಾಲಕಿಯರ ವಸತಿ ಸೈನಿಕ ಶಾಲೆಯೂ ಈ ಬಾಧೆಯಿಂದ ಹೊರತಾಗಿಲ್ಲ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಕೂಡ ಕರ್ತವ್ಯಬದ್ಧರಾಗಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಶಾಲಾ ಶಿಕ್ಷಕ ವೃಂದದವರು ಆನ್–ಲೈನ್ ಬೋಧನೆ ಮುಖಾಂತರ, ವಿದ್ಯಾರ್ಥಿನಿಯರು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡಲು ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದಾರೆ, ವಿದ್ಯಾರ್ಥಿನಿಯರಿಗೆ ಆನ್–ಲೈನ್ ಮುಖಾಂತರ ಪರೋಕ್ಷ ತರಗತಿಗಳನ್ನು ಹಾಗೂ ಸಮಾಲೋಚನೆ ನಡೆಸುತ್ತಿದ್ದಾರೆ ಅಲ್ಲದೇ ಪಾಲಕರನ್ನು ಸಂಪರ್ಕಿಸಿ ಸಂವಾದ ಸಭೆಗಳನ್ನು ನಡೆಸುತ್ತಿದ್ದಾರೆ. ಶಾಲೆಯ ದಿನನಿತ್ಯದ ಆಗುಹೋಗುಗಳನ್ನು ಸಂಬಂಧಪಟ್ಟ ಆಸಕ್ತವಲಯಗಳಿಗೆ ಅರುಹಲಾಗುತ್ತಿದೆ ಹಾಗೇನೇ ಸಿಬ್ಬಂದಿ ವರ್ಗವು ಶಾಲಾ ಸಮುಚ್ಛಯವನ್ನು ಅಚ್ಚುಕಟ್ಟಾಗಿ, ಸ್ವಚ್ಛಂದವಾಗಿ ಇಡಲು ಶ್ರಮಿಸುತ್ತಿದೆ. ಆರೋಗ್ಯ ಹಾಗೂ ಸುರಕ್ಷತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ತರಗತಿಗಳು, ವಸತಿನಿಲಯಗಳು ಮತ್ತು ಶಾಲಾ ಆವರಣವನ್ನು ಸ್ಯಾನಿಟೈಸ್ ಮಾಡಲಾಗಿದೆ. ವಿದ್ಯಾರ್ಥಿನಿಯರು ಅತ್ಯಂತ ಆರಾಮದಾಯಕ ವಸತಿ ಸೌಕರ್ಯವನ್ನು ಹೊಂದುವಂತೆ ಮಾಡಲು, ಸುಮಾರು 20 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಎರಡು ವಸತಿ ನಿಲಯಗಳನ್ನು ನಿರ್ಮಿಸಲಾಗುತ್ತಿದೆ.

ಶಾಲೆಯ ಪುನರಾರಂಭಕ್ಕಾಗಿ ಸರ್ಕಾರದ ಆದೇಶವನ್ನು ಸದ್ಯ ಎದುರು ನೋಡಲಾಗುತ್ತಿದೆ. ಮಕ್ಕಳಿಂದಲೇ ಶಾಲೆ ಮರುಜೀವ ಪಡೆಯುವುದು ಎಂಬುದು ನೈಜ ಅಂಶವಾಗಿದೆ. ಈ ಸಂದರ್ಭದಲ್ಲಿ ನಾನು ಪಾಲಕರು ಹಾಗೂ ಪೋಷಕರಲ್ಲಿ ನಿಮ್ಮ ಮಗಳ ಪ್ರವೇಶ ಶುಲ್ಕವನ್ನು ಕೂಡಲೇ ಭರಿಸಬೇಕಾಗಿ ವಿನಯಪೂರ್ವಕ ಮನವಿ ಮಾಡುತ್ತೇನೆ. ಸಮಯೋಚಿತವಾಗಿ ಸಂದಾಯಿಸಿದ ಶುಲ್ಕ ಶಾಲೆಯ ಕಾರ್ಯವಿಧಿಗಳು ವಿಘ್ನರಹಿತ, ಸಾಂಗೋಪಾಂಗವಾಗಿ ಸಾಗಬಲ್ಲವು ಎಂಬುವುದು ನನ್ನ ಪ್ರಾಮಾಣಿಕ ಅನಿಸಿಕೆ. ನನ್ನ ಈ ಮನವಿಗೆ ಸ್ಪಂದಿಸಿ ಸಹಕರಿಸುವಿರಿ ಎಂದು ಭಾವಿಸುತ್ತೇನೆ.

ವಂದನೆಗಳೊಂದಿಗೆ

ಸುರಕ್ಷಿತವಾಗಿರಿ ಆರೋಗ್ಯದಿಂದಿರಿ ............

ಸಹಿ/–
ಡಾ. ದಾಕ್ಷಾಯಣಿ ಎಸ್. ಜಂಗಮಶೆಟ್ಟಿ
ಅಧ್ಯಕ್ಷರು, ಕಿ.ರಾ.ಚ.ಸ್ಮಾ.ಸಮಿತಿ, ಕಿರಾಚಬಾವಸೈಶಾಲೆ, ಕಿತ್ತೂರ